ಹದ್ದು ಕೋಳಿಪಿಳ್ಳೆಯನ್ನು ಎಗರಿಸಿಕೊಂಡು ಹೋಗುವಂತೆ? ಆ ಸಂದರ್ಭದಲ್ಲಿ ಮೆದುಳು ಸ್ಥಂಭಿಸಿ ಹೋದಂತಾಗಿ ಇಹದ ಪರಿವೆಯನ್ನೇ ಕಳೆದುಕೊಂಡಿದ್ದ ವೇದಮ್ಮನಿಗೆ ಸಹಾಯಹಸ್ತ ಚಾಚಿದ್ದು ನೆರೆಮನೆಯ ಈ ಇವರೇ. ಅವರ ಮಗಳಿಗೆ ಫೋನ್ ಮುಖಾಂತರ ವಿಷಯ ತಿಳಿಸಿ, ಪೂನಾದಿಂದ ಅವಳು ಬರುವ ಮೊದಲೇ ಅವಳಿಂದ ವಿಷಯ ಗೊತ್ತಾದ ಹತ್ತಿರದಲ್ಲಿದ್ದ ಬಳಗದವರು ಮನೆಯಲ್ಲಿ ಜಮಾಯಿಸತೊಡಗಿ, ಅಲ್ಲಿಗೆ ಇವರು ಮಾಡಬೇಕಾದ ಕರ್ತವ್ಯ ಮಾಡಿದಂತಾಗಿತ್ತು. 'ಛೇ ಪಾಪ, ಛೇ ಅನ್ಯಾಯ...' ಎಂದುಕೊಳ್ಳುತ್ತಾ ಗಂಡ, ಹೆಂಡತಿ ಅಲ್ಲಿಂದ ಕಳಚಿಕೊಂಡಿದ್ದರು.

* * *

ಮಗಳ ಮನೆಯಲ್ಲಿ ಒಂದು ತಿಂಗಳಿದ್ದು ವಾಪಸು ಬಂದ ವೇದಮ್ಮ ಗುರುತು ಸಿಗದಂತೆ ಬದಲಾಗಿಬಿಟ್ಟಿದ್ದರು. ಮುಕ್ಕಾಲುವಾಸಿ ಬಿಳಿಯಾಗಿದ್ದ ತಲೆಗೂದಲು ಒಮ್ಮೆಲೇ ವಾರ್ಧಕ್ಯವನ್ನು ಅವರ ಮೇಲೆ ಆವಾಹಿಸಿದಂತಿತ್ತು. ಮುಖದಲ್ಲಿ ತಬ್ಬಲಿತನದ ಭಾವ. ನಡಿಗೆಯಲ್ಲಿ ಅಸ್ಥಿರತೆ.

'ಹೇಳಿದ್ರೆ ಕೇಳಲಿಲ್ಲ. ಹಟ ಮಾಡಿ ಬಂದಿದಾಳೆ. ನಮ್ಮಮ್ಮನ ಮೇಲೆ ಒಂದು ಕಣ್ಣಿಟ್ಟಿರಿ ಪ್ಲೀಸ್ ಪುರುಸೊತ್ತಾದಾಗ ನಾನು ಬರ್ತೀರ್ತೀನಿ' ಕಂಬನಿ ತುಂಬಿಕೊಂಡು ಹೇಳಿದ್ದಳು ಮಗಳು, ನಳಿನಾಕ್ಷಿಯ ಬಳಿ.

'ಛೇ, ಅದನ್ನೂ ನೀವು ಹೇಳ್ಬೇಕಾ?' ಆಶ್ವಾಸನೆ ಕೊಟ್ಟಿದ್ದಳು ನಳಿನಾಕ್ಷಿ. ಅವಳ ಗಂಡನಿಗೆ ವರ್ಗಾವಣೆ ಇಲ್ಲದ ಕೆಲಸ. ಮದುವೆಯಾಗಿ ಈ ಮನೆಗೆ ಕಾಲಿಟ್ಟ ನಳಿನಾಕ್ಷಿ ಬಾಡಿಗೆ ಮನೆಯಾದರೂ ಸ್ವಂತ ಮನೆಯಂತೆ ಈ ಮನೆಗೆ ಹೊಂದಿಕೊಂಡುಬಿಟ್ಟಿದ್ದಳು. ಸಂಸಾರ ಸಾಗರಕ್ಕೆ ಹೊಸದಾಗಿ ಕಾಲಿಟ್ಟ ಆ ಸಂದರ್ಭದಲ್ಲಿ ವೇದಮ್ಮ ಬೇಕಾದಷ್ಟು ಸಹಾಯ ಮಾಡಿದ್ದಾರೆ. ಯಾವ ವಿಷಯದಲ್ಲಿ ಅನುಮಾನ ಬಂದರೂ 'ಆಂಟೀ' ಎಂದು ಕಿಟಕಿಯ ಸರಳಿಗೆ ಮುಖ ಕೊಟ್ಟು ಕರೆದರೆ ಸಾಕು, ಅವರ ಮನೆಯ ಕಿಟಕಿಯಲ್ಲಿ ಹಾಜರು ವೇದಮ್ಮ. ಹದವಾಗಿ ಬೆಣ್ಣೆ ಕಾಯಿಸಿ ತುಪ್ಪ ಮಾಡಲು ಹೇಳಿಕೊಟ್ಟವರು, ಗರಿಗರಿಯಾಗಿ ಕೋಡುಬಳೆ ಕರಿಯಲು ಕಲಿಸಿದವರು, ಪುಡಿಗಿಡಿಯ ಹದ ಗೊತ್ತು ಮಾಡಿಸಿದವರು ಇದೇ ವೇದಮ್ಮ. ಮಗಳಿಗೆ ಮದುವೆ ಮಾಡಿ ಕಳಿಸಿಕೊಟ್ಟಿದ್ದವರಿಗೆ ಒಂದರ್ಥದಲ್ಲಿ ನಳಿನಾಕ್ಷಿ ಮಗಳ ಹಾಗೇ ಆಗಿಬಿಟ್ಟಿದ್ದಳು. ನಳಿನಾಕ್ಷಿ ತಾಯಿಯಾದ ಮೇಲೆ ಅವರ ಮೇಲಿನ ಅವಲಂಬನೆ ಮತ್ತೊಂದಿಷ್ಟು ಹೆಚ್ಚಾಗಿತ್ತು. ಮಕ್ಕಳಿಗೆ ಸೀತ ಆದರೆ, ಕೆಮ್ಮಿದರೆ, ಹೊಟ್ಟೆನೋವು ಬಂದರೆ ವೇದಮ್ಮನ ಮನೆಮದ್ದು. 'ಪ್ರತಿಯೊಂದಕ್ಕೂ ಹೆದರಬೇಡ ಮಾರಾಯ್ತೀ. ಕಾಯಿಲೆ ಕಸಾಲೆ ಬರದೆ ಮಕ್ಕಳು ದೊಡ್ಡೋರಾಗ್ತಾರಾ?' ಎನ್ನುವ ಹಿತವಚನ. ನಳಿನಾಕ್ಷಿಯ ಇಬ್ಬರು ಮಕ್ಕಳು ತಮ್ಮ ಸ್ವಂತ ಮನೆಯಲ್ಲಿ ಓಡಾಡಿದಷ್ಟೇ ಸಲೀಸಾಗಿ ನೆರೆಮನೆಯಲ್ಲೂ ಓಡಾಡಿಕೊಂಡು ಬೆಳೆದಿದ್ದಾರೆ. ಋಣ ಅಂದರೆ ಮತ್ತೇನು? ರಕ್ತಸಂಬಂಧವಷ್ಟೇ ಸಂಬಂಧವೆನ್ನುವುದು ದೊಡ್ಡ ಭ್ರಮೆ. ಕೆಲವು ಸಲ ರಕ್ತಸಂಬಂಧಕ್ಕಿಂತಲೂ ಮಿಗಿಲಾಗಿರುತ್ತದೆ ಇಂತಾ ಆಪ್ತ ಸಂಬಂಧ. ವೇದಮ್ಮನ ಮಗಳಿಗೆ ಕೊಟ್ಟ ಮಾತನ್ನು ತನ್ನಿಂದಾದಷ್ಟು ಸಮರ್ಥವಾಗಿ ನಿಭಾಯಿಸಿಕೊಂಡು ಬಂದಿದ್ದಾಳೆ ನಳಿನಾಕ್ಷಿ, ಕಳೆದ ಒಂದೂವರೆ ವರ್ಷಗಳಿಂದ.

'ಯಾಕೆ ವಾಪಸು ಬಂದ್ಬಿಟ್ರಿ ಆಂಟಿ? ಅಲ್ಲೇ ಇರಬಹುದಾಗಿತ್ತು' ಅವರ ಬಾಯಿ ಬಿಡಿಸಲು ಮತ್ತೆ ಮತ್ತೆ ಕೇಳಿದ್ದಿತ್ತು ನಳಿನಾಕ್ಷಿ.

'ಇವರನ್ನ ಒಬ್ರೇ ಬಿಟ್ಟು ಹೇಗೆ ಅಲ್ಲಿರೋಕಾಗುತ್ತೆ? ಎಷ್ಟು ದಿನ ಇರೋಕಾಗುತ್ತೆ?' ಅಪದ್ಧದ ಮಾತಾಡುತ್ತಿದ್ದರು ವೇದಮ್ಮ. ಗಂಡ ಇಲ್ಲವಾಗಿದ್ದರೂ ಅವರ ಆತ್ಮ ಇನ್ನೂ ಇಲ್ಲೇ ಸುಳಿದಾಡಿಕೊಂಡಿರುತ್ತದೆ ಎನ್ನುವುದು ಅವರ ಗಟ್ಟಿ ನಂಬುಗೆ. ಗಂಡನ ದೊಡ್ಡ ಫೋಟೊವೊಂದನ್ನು ನಡುಮನೆಯ ಗೋಡೆಗೆ ತೂಗು ಹಾಕಿದ್ದಾರೆ. ದಿನವೂ ಆ ಪಟಕ್ಕೆ ಮನೆಯೆದುರಿನ ಹೂಗಿಡಗಳಲ್ಲಿ ಬೆಳೆದ ಹೂಹಾರದ ಅಲಂಕಾರ. ಊಟ, ತಿಂಡಿ ಏನೇ ಇರಲಿ, ಗಂಡನ ಫೋಟೊದ ಎದುರಿಗಿಟ್ಟು 'ತಿಂಡಿ ತಿನ್ನಿ, ಊಟ ಮಾಡಿ' ಎಂದು ವಿನಂತಿಸಿಕೊಂಡ ನಂತರ ವೇದಮ್ಮನ ಹೊಟ್ಟೆಯ ಚಿಂತೆ. ನಳಿನಾಕ್ಷಿ ಯಾವ ಸಮಯದಲ್ಲಿ ಅಲ್ಲಿಗೆ ಹೋದರೂ ಮಾತುಕತೆ ಅನ್ನುವುದು ವೇದಮ್ಮನ ಗಂಡನ ಸುತ್ತಲೇ ಗಿರಕಿ ಹೊಡೆಯುತ್ತಿತ್ತು, ಅದು ಬಿಟ್ಟು ಅನ್ಯ ಪ್ರಪಂಚದ ಗೊಡವೆಯೇ ಇಲ್ಲದಂತೆ. ಅವರ ಮದುವೆ ಎಲ್ಲಾಯ್ತು, ಹೇಗಾಯ್ತು ಎನ್ನುವುದರಿಂದ ತೊಡಗಿ ಗಂಡ ತನ್ನನ್ನು ಅದೆಷ್ಟು ಮುಚ್ಚಟೆಯಿಂದ ನೋಡಿಕೊಂಡರು ಎನ್ನುವವರೆಗೆ ಹೇಳಿದ್ದನ್ನೇ ಹೇಳುತ್ತಿರುತ್ತಿದ್ದರು ವೇದಮ್ಮ. ಬೆಳಿಬೆಳಿಗ್ಗೆ ಕಾಫಿ ಮಾಡಿ ಗಂಡ ತಮ್ಮನ್ನು ಎಬ್ಬಿಸುತ್ತಿದ್ದುದು, ಪ್ರತಿ ಹಬ್ಬಕ್ಕೂ ಒತ್ತಾಯಿಸಿ ಹೊಸ ಸೀರೆ ಕೊಡಿಸುತ್ತಿದ್ದುದು, ಅವರು ಮಾಡಿಸಿಕೊಟ್ಟ ಒಡವೆಗಳು, ಮದುವೆಯಾದಾಗಿನಿಂದ ಇವತ್ತಿನವರೆಗಿನ ಹಳೆಯ ಫೋಟೊಗಳ ಆಲ್ಬಂಗಳ ಸಂದರ್ಭ ಸಹಿತ ವಿವರಣೆ, ಕೊನೆಯಲ್ಲಿ ಒಂದು ಒಬ್ಬೆ ಅಳು.

'ಈ ಆಂಟಿಗೆ ಬೇಗ ಸಾವು ಬಂದು ಗಂಡನ ಜೊತೆ ಸೇರ್ಕೊಳ್ಳಿ ಅಂತ ಕೇಳ್ಕೋ ನಳಿನಿ. ಅವರನ್ನ ಬಿಟ್ಟು ನಂಗೆ ಇರೋಕಾಗಲ್ಲ ಕಣೇ'

'ಸಮಾಧಾನ ಮಾಡ್ಕೊಳ್ಳಿ ಆಂಟಿ. ನೀವು ಪುಣ್ಯ ಮಾಡಿದೀರಿ ಅಂದ್ಕೊಳ್ಳಿ. ಇಷ್ಟು ವರ್ಷ ಒಳ್ಳೆಯ ಗಂಡನ ಜೊತೆ ಸುಖವಾಗಿ ಸಂಸಾರ ಮಾಡಿದೀರಿ. ಎಷ್ಟೋ ಜನ ಸಣ್ಣ ವಯಸ್ಸಲ್ಲೇ ಗಂಡನ್ನ ಕಳ್ಕೊಂಡೋರಿರಲ್ವಾ? ಅವರ ಗತಿ ಏನು?'

ಅದಕ್ಕೂ ಪ್ರತ್ಯುತ್ತರ ಇತ್ತು ವೇದಮ್ಮನ ಬಳಿ,

'ಸಣ್ಣ ವಯಸ್ಸಿನೋರಿಗೆ ತಡೆದುಕೊಳ್ಳೋ ಶಕ್ತಿ ಇರುತ್ತೆ ಕಣೇ. ನಂಗಿಲ್ಲ ಅದು...'

ಒಂದಷ್ಟು ದಿನ ವೇದಮ್ಮನಿಗೆ ತಿಂಡಿ ತೆಗೆದುಕೊಂಡು ಹೋಗಿ ಕೊಡುತ್ತಿದ್ದಳು ನಳಿನಾಕ್ಷಿ. ಮಧ್ಯಾಹ್ನದ ಊಟಕ್ಕೆ ಅಡುಗೆ.

'ನೋಡಿ, ನಮ್ಮ ದತ್ತುಪುತ್ರಿ ತಿಂಡಿ ತಂದಿದಾಳೆ. ನಂಗೆ ಕೊಡದೆ ಅವಳ ಗಂಟಲಲ್ಲಿ ಏನೂ ಇಳಿಯಲ್ಲ...' ಎನ್ನುತ್ತಾ ಅದನ್ನೆಲ್ಲಾ ಗಂಡನ ಪಟದೆದುರು ಇಟ್ಟು ಸಮರ್ಪಣೆ ಮಾಡಬೇಕು ವೇದಮ್ಮ. ಅವರು ಒಬ್ಬರೇ ಮನೆಯಲ್ಲಿದ್ದಾಗ ಗಂಡನ ಫೋಟೊದ ಎದುರು ಏನೋ ನಿವೇದನೆ ನಡೆಯುತ್ತಿರುತ್ತದೆ ಎಂದು ನಳಿನಾಕ್ಷಿಯ ಅನಿಸಿಕೆ. ಕಿಟಕಿಗೆ ಕಿವಿಗೊಟ್ಟು ಆ ಮನೆಯಲ್ಲಿ ನಡೆಯುವ ವಿದ್ಯಮಾನಕ್ಕೆ ಸಾಕ್ಷಿಯಾಗಬೇಕೆಂದು ಅವಳು ಪ್ರಯತ್ನಪಟ್ಟಿದ್ದುಂಟು. ಆದರೆ ಅದು ಸಾಧ್ಯವಾಗದಂತೆ ಆ ಕಡೆಯ ಕಿಟಕಿಯನ್ನು ಮುಚ್ಚಿಬಿಟ್ಟಿದ್ದರು ವೇದಮ್ಮ. ಅದನ್ನು ಮಾತ್ರವಲ್ಲ, ಮನೆಯ ಎಲ್ಲಾ ಕಿಟಕಿಗಳನ್ನೂ.

'ಯಾಕೆ ಕಿಟಕಿ ಹಾಕಿಟ್ಟಿರ್ತೀರಿ? ಕಿಟಕಿ ತೆಗೆದಿಟ್ಟಿದ್ರೆ ಏನಾದ್ರೂ ಸಹಾಯ ಬೇಕೂಂದ್ರೆ ಕರೆಯೋಕೆ ಅನುಕೂಲ ಆಗುತ್ತಲ್ವಾ?'

'ಕಿಟಕಿ ತೆಗೆದಿಡೋಕೆ ಹೆದರಿಕೆ ಆಗುತ್ತೆ ಕಣೇ...'

'ಯಾಕೆ?'

'ಯಾಕೆ ಅಂದ್ರೆ? ನನ್ನ ಕಷ್ಟ ನಿಂಗೊತ್ತಾಗಲ್ಲ ಬಿಡು...'

ಸತ್ಯಕ್ಕೂ ಗೊತ್ತಾಗುತ್ತಿರಲಿಲ್ಲ ನಳಿನಾಕ್ಷಿಗೆ. ದಶಕಗಳಿಂದ ಅಭ್ಯಾಸವಾಗಿ ಹೋಗಿದ್ದ ಜೀವನಕ್ರಮ. ಸದಾ ಜೊತೆಗಿರುತ್ತಿದ್ದ ಒಡನಾಡಿ ಸುಳಿವು ಸೂಚನೆ ಕೊಡದೆ ಕಣ್ಣೆದುರಿನಿಂದ ಹೊರಟು ಹೋದರೆ ಕಷ್ಟ, ದುಃಖ ಆಗುವುದಿಲ್ಲವೆಂದು ಯಾರು ಹೇಳುತ್ತಾರೆ? ಕಾಲ ಎಲ್ಲವನ್ನೂ ಮಸುಕಾಗಿಸುತ್ತದೆ, ಮರೆಯಾಗಿಸುತ್ತದೆ ಎಂದು ನಳಿನಾಕ್ಷಿಯ ನಂಬುಗೆ. ಆದರೆ ವೇದಮ್ಮನ ವಿಷಯದಲ್ಲಿ ಹಾಗಾಗುತ್ತಿರುವುದು ಕಂಡುಬರುತ್ತಿಲ್ಲ. ಅವರು ಹಲುಬುವುದು, ಕೊರಗುವುದು ಯಥಾಸ್ಥಿತಿಯಲ್ಲಿ ಉಳಿದುಕೊಂಡಿತೇ ವಿನಾ ತಣ್ಣಗಾಗುವಂತೆ ಕಾಣುತ್ತಿಲ್ಲ.

'ನಂಗೆ ಬೇಗ ಸಾವು ಬರ್ಲೀಂತ ಕೇಳ್ಕೊಳ್ಳೇ...' ಅನ್ನುವುದು ದಿನದ ಹಾಡು. ಅವವೇ ಮಾತು. ಅವವೇ ಹಳಹಳಿಕೆ, ಕನವರಿಕೆ. ನಳಿನಾಕ್ಷಿಗೆ ರಗಳೆ ಅನ್ನಿಸತೊಡಗಿತೇ? ಯಾವುದಕ್ಕೂ ಒಂದು ಮಿತಿ ಇರುತ್ತದೆ ಅನ್ನುವ ಮನೋಸ್ಥಿತಿ? ಗಂಡ ಹೇಳಿದ್ದ,

'ಊಟ, ತಿಂಡಿ ಕೊಡೋದು ಕಮ್ಮಿ ಮಾಡು. ಅವರಿಗೆ ಬೇಕಾದ್ದನ್ನ ಅವರು ಮಾಡ್ಕೊಳ್ಳಿ. ಕೈಗೆ ಕೆಲಸ ಇದ್ದರೆ ಮನಸ್ಸು ಬೇರೆ ದಿಕ್ಕಿಗೆ ಹರಿಯುತ್ತೆ' ಇದು ಬುದ್ಧಿವಂತಿಕೆಯ ಮಾತೋ ಅಥವಾ ವಾಸ್ತವಕ್ಕೆ ಅವರನ್ನು ಒಗ್ಗಿಸುವ ಸದುದ್ದೇಶದಿಂದ ಗಂಡ ಈ ಮಾತಾಡಿದ್ದೋ ನಳಿನಾಕ್ಷಿಗೆ ಗೊತ್ತಿಲ್ಲ. ಅವಳೇನು ದಿನಾ ಅವರ ಅಗತ್ಯಗಳನ್ನು ಪೂರೈಸುತ್ತಿದ್ದಳು ಅಂತೇನಲ್ಲ. ಆದರೆ ಅವರ ಕಡೆ ಒಂದು ಕಣ್ಣಿಟ್ಟು ಆ ಮನೆಯಲ್ಲಿ ತಿಂಡಿ, ಅಡುಗೆಗಳ ಸೂಚನೆಯನ್ನು ಗಾಳಿ ತಲುಪಿಸದ ದಿನ ಅವರ ಯೋಗಕ್ಷೇಮ ವಿಚಾರಿಸಿಕೊಂಡು ಬರುತ್ತಿದ್ದಳು. 'ಇವತ್ತೇನು ಒಲೆ ಹಚ್ಚಿದ ಹಾಗೆ ಕಾಣ್ತಿಲ್ಲ' ಎನ್ನುತ್ತಾ ಅವರ ಬಾಯಿ ಬಿಡಿಸುತ್ತಿದ್ದಳು.

'ಬೇಜಾರು ಮಾರಾಯ್ತೀ. ಒಂದಿನ ಉಪಾಸ ಇದ್ರೆ ಸಾಯ್ತಾರಾ?' ಅದೇ ಸಿದ್ಧ ಉತ್ತರ. ಅಗಲಿದ ಗಂಡನ ನೆನಪಲ್ಲಿ ಯಾವುದೋ ಹಳೆಯ ಘಟನೆಯ ಹಳಹಳಿಕೆ. ಉಮ್ಮಳಿಸಿಕೊಂಡು ಬರುವ ದುಃಖ, ಕಣ್ಣೀರು.